★★★

ದೇವರು ನನಗೆ ಏನೂ ಕಡಿಮೆ ಮಾಡಿಲ್ಲವೆಂಬ ಚನ್ನಪ್ಪನ ಭಾವನೆಗೆ ಸಕಾರಣವೂ ಇತ್ತು. ಮಗ ಚಂದ್ರಕಾಂತ ತಿಂಗಳಿಗೆ ಎರಡೂವರೆ ಲಕ್ಷ ಸಂಬಳ ತರುವ ಸಾಫ್ಟ್‌ವೇರ್ ಎಂಜಿನಿಯರಾಗಿ ಯಾವುದೇ ಕೊರತೆಯಿಲ್ಲದಂತೆ ಬದುಕು ಸಾಗಿಸುತಿದ್ದ. ಅವನ ಹೆಂಡತಿ ಕುಸುಮ ಕೂಡ ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಸಾಫ್ಟವೇರ್ ಎಂಜಿನಿಯರಾಗಿ ದುಡಿಯುತ್ತಿದ್ದಳು. ಯಶವಂತಪುರದ ಗೋಲ್ಡನ್ ಗೇಟ್ ಅಪಾರ್ಟ್‌ಮೆಂಟಿನ ಇಪ್ಪತ್ತೊಂದನೇ ಅಂತಸ್ತಿನಲ್ಲಿದ್ದ ಸ್ವಂತ ಐಷಾರಾಮಿ ಫ್ಲ್ಯಾಟಿನಲ್ಲಿ ವಾಸ್ತವ್ಯ ಹೂಡಿದ್ದರು. ಓಡಾಡಲು ಗಂಡನಿಗೊಂದು ಮತ್ತು ಹೆಂಡತಿಗೊಂದು ಹೈ ಎಂಡ್ ಕಾರುಗಳೂ ಇದ್ದವು. ಆಗಾಗ ವೃತ್ತಿನಿಮಿತ್ತ ವಿದೇಶಪ್ರಯಾಣದ ಭಾಗ್ಯವೂ ಅವರಿಗಿತ್ತು. ಅವರಿಗಿದ್ದ ಹನ್ನೊಂದು ವರ್ಷದ ಹೆಣ್ಣು ಮಗಳು ದಿಶಾ ಡೆಲ್ಲಿ ಪಬ್ಲಿಕ್ ಸ್ಕೂಲಿನಲ್ಲಿ ಐದನೇ ತರಗತಿಯಲ್ಲಿ ಓದುತಿದ್ದಳು. ಇದೆಲ್ಲವನ್ನೂ ಯಾವಾಗಲಾದರೊಮ್ಮೆ ಕಣ್ಣಾರೆ ಕಾಣುತ್ತಿದ್ದ ಚನ್ನಪ್ಪ ಮತ್ತು ಪುಟ್ಟಕ್ಕರಿಗೆ ದೇವರು ನಮ್ಮ ಬದುಕನ್ನು ಮಗನ ಮೂಲಕ ಸಾರ್ಥಕಗೊಳಿಸಿದ ಎಂಬ ಧನ್ಯತಾಭಾವವಿತ್ತು.

ಮೂವತ್ತು ನಲವತ್ತು ಮನೆಯಿದ್ದ ಅಗ್ರಹಾರ ಎಂಬ ಒಂದು ಸಣ್ಣ ಹಳ್ಳಿಯಲ್ಲಿ ಅನಕ್ಷರಸ್ಥ ರೈತನೊಬ್ಬನ ಮಗನಾಗಿ ಹುಟ್ಟಿ ಬೆಳೆದು ಕನ್ನಡ ಮಾಧ್ಯಮದಲ್ಲಿಯೇ ಓದಿ ನಗರದ ಸಮಕಾಲೀನ ಇಂಗ್ಲಿಷ್ ಮಾಧ್ಯಮದ ಮಕ್ಕಳೊಂದಿಗೆ ಸ್ಪರ್ಧಿಸಿ ಕಂಪ್ಯೂಟರ್ ಎಂಜಿನಿಯರಿಂಗ್ ಸೀಟು ಪಡೆದು, ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ಗಿಟ್ಟಿಸಿಕೊಳ್ಳುವುದು ಸುಲಭದ ಮಾತೇನು ಆಗಿರಲಿಲ್ಲ. ಚಂದ್ರಕಾಂತ ತನ್ನ ಪ್ರತಿಭೆಯ ಜೊತೆಗೆ ಅತೀವ ಶ್ರಮಪಡುವ ಗುಣವನ್ನೂ ಮೈಗೂಡಿಸಿಕೊಂಡಿದ್ದ. ಅದು ಅವನ ಯಶಸ್ಸಿನ ಗುಟ್ಟಾಗಿತ್ತು. ಇದರಿಂದಾಗಿ ಊರಿನಲ್ಲಿ ಅವನ ಮತ್ತು ಅವನ ತಂದೆ ತಾಯಿಯ ಬಗೆಗೆ ಎಲ್ಲರಿಗೂ ಗೌರವ ಮತ್ತು ತಮ್ಮೂರಿನಲ್ಲೂ ಒಬ್ಬ ಸಾಫ್ಟ್‌ವೇರ್ ಎಂಜಿನಿಯರಿದ್ದಾನೆ ಎಂಬುದು ಅವರೆಲ್ಲರಿಗೂ ಹೆಮ್ಮೆಯ ವಿಷಯವಾಗಿತ್ತು.

ಇಷ್ಟೆಲ್ಲಾ ಇದ್ದರೂ ಚನ್ನಪ್ಪ ಮತ್ತು ಪುಟ್ಟಕ್ಕರಿಗೆ ಅವರದೇ ಆದ, ಯಾರಿಗೂ ಗೋಚರವಾಗದ ನೋವು, ಕೊರಗುಗಳು ಇದ್ದವು. ಉಟ್ಟುಕೊಳ್ಳುವ ಬಟ್ಟೆಗಳಿಗಾಗಲೀ ಉಣ್ಣುವ ಅನ್ನಕ್ಕಾಗಲೀ ಅವರಿಗೆ ಕೊರತೆಯಿರಲಿಲ್ಲ. ಅವರು ಹೊಲಗದ್ದೆಗಳಲ್ಲಿ ಬೆಳೆಯುತಿದ್ದ ರಾಗಿ, ಭತ್ತ, ಕಾಳುಕಡಿಗಳು ಅವರಿಬ್ಬರ ಜೀವನಕ್ಕೆ ಸಾಕಾಗಿ ಮಿಗುತ್ತಿದ್ದವು. ಹಣದ ಅವಶ್ಯಕತೆ ಬಂದರೆ ಮಗ ಚಂದ್ರಕಾಂತ ಏನು, ಯಾಕೆ ಎಂದು ಪ್ರಶ್ನಿಸದೇ ಕೇಳಿದಷ್ಟು ಹಣವನ್ನು ಆನ್‌ಲೈನ್ ವರ್ಗಾವಣೆಯ ಮೂಲಕ ಚನ್ನಪ್ಪನ ಬ್ಯಾಂಕಿನ ಅಕೌಂಟಿಗೆ ತುಂಬುತ್ತಿದ್ದ. ಹಾಗಾಗಿ ಹಣದ ಕೊರತೆಯೂ ಅವರಿಗೆ ಇರಲಿಲ್ಲ. ಆದರೆ ಅವರಿಗೆ ಇದ್ದುದು ಒಂದೇ ಕೊರತೆ. ತಮ್ಮ ಕಷ್ಟಸುಖಗಳನ್ನು ವಿಚಾರಿಸುವ, ಉಂಡೆಯಾ ಉಟ್ಟೆಯಾ, ಹುಷಾರಾಗಿದ್ದೀರಾ ಎಂದು ಬಾಯಿಮಾತಿಗೂ ಕೇಳುವವರು ಅವರ ಪಾಲಿಗೆ ಯಾರೂ ಇರಲಿಲ್ಲ. ಚಂದ್ರಕಾಂತ ಪ್ರತಿಭಾವಂತ ಯಶಸ್ವೀ ವ್ಯಕ್ತಿಯಾಗಿ ತಂದೆ ತಾಯಂದಿರಿಗೆ, ಹುಟ್ಟಿದ ಊರಿಗೆ ಕೀರ್ತಿ ತಂದಿದ್ದರೂ ಸಾಫ್ಟ್‌ವೇರ್ ಎಂಜಿನಿಯರಾಗಿ, ತನ್ನದೇ ವೃತ್ತಿಯಲ್ಲಿದ್ದ ಹುಡುಗಿಯೊಂದಿಗೆ ಮದುವೆಯಾಗಿ ಸಂಸಾರಸ್ಥನಾದ ಮೇಲೆ ತನ್ನ ತಂದೆತಾಯಿಯರನ್ನೂ ಹುಟ್ಟಿದ ಊರನ್ನೂ ಮರೆತೇಬಿಟ್ಟನೆಂದು ಚನ್ನಪ್ಪ ಪುಟ್ಟಕ್ಕರಿಗೆ ಅನಿಸಿತ್ತು. ಊರಿನ ಹಬ್ಬಹರಿದಿನಗಳಿಗಾಗಲೀ, ತೇರುಜಾತ್ರೆಗಳಿಗಾಗಲೀ ತನ್ನ ಹೆಂಡತಿ ಮಗಳನ್ನು ಕರೆತಂದು ತಂದೆತಾಯಂದಿರೊಂದಿಗೆ ಪ್ರೀತಿ ವಾತ್ಸಲ್ಯದ ಒಂದೆರಡು ಮಾತನಾಡಿ ಸಂತಸದ ಕ್ಷಣಗಳನ್ನು ಕಳೆಯುವ ಪರಿಪಾಠವನ್ನು ಅವನು ಬೆಳೆಸಿಕೊಂಡಿರಲೇ ಇಲ್ಲ. ಎಂದೋ ಆರು ತಿಂಗಳಿಗೋ ವರುಷಕ್ಕೋ ಅದೇ ದಾರಿಯಲ್ಲಿ ಎಲ್ಲಿಗೋ